ಊ) ವಿಷಯ:– ಪಶುಸಂಗೋಪನಾ ಇಲಾಖೆಯವರು ಕೃತಕ ಗರ್ಭಧಾರಣಾ ಕೇಂದ್ರಗಳನ್ನು ಹೆಚ್ಚು ಮಾಡುವ ಬಗ್ಗೆ.

ಶ್ರೀ ಬಿ.ಆರ್. ಪಾಟೀಲ್ (ಆಳಂದ):– ಮಾನ್ಯ ಅಧ್ಯಕ್ಷರೆ, ಪಶುಸಂಗೋಪನಾ ಇಲಾಖೆಯವರು ಬೈಸ್ ಸಂಸ್ಥೆಗೆ ಕೃತಕ ಗರ್ಭಧಾರಣೆ ಮಾಡುವಂಥ ಒಂದು ಜವಾಬ್ದಾರಿಯನ್ನು ಕೊಟ್ಟಿದ್ದರು. ಇತ್ತೀಚೆಗೆ ಆ ಕೆಲಸ ನಿಂತು ಹೋಗುತ್ತಿದೆ. ಅದರಿಂದ ಹಾಲು ಉತ್ಪಾದನೆಗೆ ಮತ್ತು ತಳಿ ಅಭಿವೃದ್ಧಿಗೆ ಬಹಳ ತೊಂದರೆಯಾಗುತ್ತಿದೆ. ಆದಷ್ಟು ಬೇಗನೆ ಇದಕ್ಕೆ ಅನುದಾನವನ್ನು ಒದಗಿಸಬೇಕು. ಈಗ ಐದು ಕೇಂದ್ರಗಳನ್ನು ತಾವು ಮಾಡಿದ್ದೀರಿ. ಇನ್ನೂ ಹೆಚ್ಚಿನ ಕೇಂದ್ರಗಳನ್ನು ಮಾಡಿದರೆ ಇದು micro economic development ಆಗುತ್ತದೆ. ಆ ಕೆಲಸವನ್ನು ತಾವು ಮಾಡಬೇಕೆಂದು ನನ್ನ ವಿನಂತಿ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪಶುಸಂಗೋಪನೆ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾಗಿರುವಂಥ ಬಿ.ಆರ್. ಪಾಟೀಲರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವಂಥ ವಿಚಾರದಲ್ಲಿ ಮತ್ತು ಅವರು ಕೊಟ್ಟಿರುವಂಥ ಸಲಹೆಯಲ್ಲಿ ಅರ್ಥವಿದೆ. ಅದಕ್ಕೆ ನಾನು ಇನ್ನೊಂದು ಗಂಟೆಯಲ್ಲಿ ಅಥವಾ ನಾಳೆ ಬೆಳಗ್ಗೆ ಉತ್ತರವನ್ನು ಕೊಡುತ್ತೇನೆ. ಅದಕ್ಕೆ ಸರ್ಕಾರ ಒಪ್ಪಿದೆ.

ಅಧ್ಯಕ್ಷರು:– ಈಗ ಸಿ.ಎನ್. ಬಾಲಕೃಷ್ಣರವರು.

(ಮಾನ್ಯ ಸದಸ್ಯರು ಸದನದಲ್ಲಿ ಹಾಜರಿರಲಿಲ್ಲ)

ಅಧ್ಯಕ್ಷರು:– ಈಗ ಮುನಿಶಾಮಪ್ಪನವರು.

ಋ) ವಿಷಯ:– ದೇವನಹಳ್ಳಿ ಟೋಲ್ ಕೇಂದ್ರದ ಸುತ್ತಮುತ್ತಲಿರುವ ಗ್ರಾಮಗಳ ಸ್ಥಳೀಯರಿಗೆ ಟೋಲ್ ಪಾವತಿಯಿಂದ ವಿನಾಯಿತಿ ನೀಡುವ ಬಗ್ಗೆ.

ಶ್ರೀ ಪಿಳ್ಳೆ ಮುನಿಶಾಮಪ್ಪ (ದೇವನಹಳ್ಳಿ):– ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ, ಅಂತರಾಷ್ಟ್ರೀಯ ವಿಮಾನ ನಿಲ್ದಾಣವಿದೆ. ಆ ಭಾಗದಲ್ಲಿ ಟೋಲ್